ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **78/2018**

| | ಚಾಸಾಃ **25** | ಅಸಾಃ **8** |
|---|---|---|
| ಹೆಸರು | ವಿನಯ್ | |
| ತಂದೆಯ ಹೆಸರು : | ವಾಸಪ್ಪ | |
| ವಯಸ್ಸು: | 49 ವರ್ಷ | |
| ಕೆಲಸಃ | ಪೊಲೀಸ್ ಇನ್ಸ್‌ಪೆಕ್ಟರ್, ಎಸ್ ಪಿ ಕಚೇರಿ ಹಾಸನ | |
| ವಾಸಸ್ಥಳ | ಹಾಸನ | |

ದಿನಾಂಕಃ **02/07/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು 2017 ರಿಂದ 2019 ರವರೆಗೆ ನಾನು ಪಿ.ಐ ಆಗಿ ಆಲೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ. 13.10.2017 ರಂದು ಪಿರ್ಯಾದಿದಾರರು ಮಧ್ಯಾಹ್ನ 12.00 ಗಂಟೆಗೆ ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಕೊಟ್ಟಿರುತ್ತಾರೆ. ಅದನ್ನು ಠಾಣಾ ಮೊಕದ್ದಮೆ ಸಂಖ್ಯೆ 365/2017 ರಲ್ಲಿ ದಾಖಲಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಸಾಕ್ಷಿ ನಿಪಿ-1ನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಗಿದೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಗಿದೆ.

ಅದೇ ದಿನ ಸಂಜೆ ವೇಳೆಗೆ ಈ ಕೇಸಿನ ಸಂತ್ರಸ್ಥೆ ಠಾಣೆಗೆ ಹಾಜರಾದ ಮೇರೆಗೆ ಆಕೆಯನ್ನು ವೈದ್ಯಕೀಯ ಪರೀಕ್ಷೆಗೆ ಮಹಿಳಾ ಸಿಬ್ಬಂದಿಯೊಂದಿಗೆ ಆಲೂರು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಕಡತವನ್ನು ಚಾಸಾ-26 ರವರಿಗೆ ವಹಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನಮ್ಮ ಠಾಣೆಯಿಂದ ಕೃತ್ಯ ನಡೆದ ಸ್ಥಳ 10-15 ಕಿ.ಮೀ ಇರಬಹುದು. ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿಲ್ಲ. ಪ್ರಕರಣ ದಾಖಲಾದ ಮೇಲೆ ಡಿವೈಎಸ್ ಪಿ ರವರಿಗೆ ತಿಳಿಸಿರುತ್ತೇನೆ. ನೊಂದ ಮಹಿಳೆಯವರ ಹೇಳಿಕೆಯನ್ನು ಪಡೆಯಲು

ಪ್ರಯತ್ನ ಪಟ್ಟಿರಾ ಎಂದರೆ ಸಾಕ್ಷಿ ಆಕೆಯನ್ನು ಪರೀಕ್ಷೆಗೆ ಕಳುಹಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಂತ್ರಸ್ಥೆ ಸಂಜೆ ವೇಳೆಗೆ ಬಂದಿರುತ್ತಾರೆ. ಆಕೆಯ ಜೊತೆ ಬೇರೆ ಯಾರು ಬಂದಿರುವುದಿಲ್ಲ. ಪಿರ್ಯಾದಿ ದಾಖಲು ಆಗುವುದಕ್ಕಿಂತ ಮುಂಚೆ ಊರಿನಿಂದ ಘಟನೆ ಬಗ್ಗೆ ಮಾಹಿತಿ ಬಂದಿತ್ತಾ ಎಂದರೆ ನೆನಪಿಲ್ಲ. ನೊಂದ ಮಹಿಳೆ ಯಾವುದೇ ದೂರನ್ನು ಕೊಟ್ಟಿಲ್ಲ ಹಾಗೂ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿರುವುದಿಲ್ಲ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರು.,

(ಶೈಲಾ ಬಿ ಎಂ)

ಒಂದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಹಾಸನ